doc-592
T-P-2

Reg No B G 155 20 11 72

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಬಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತದ ಮೇಲೆ ಪಾಕೀಸ್ತಾನದ ಸಮರ ಚಟುವಟಿಕೆ

ಮೈಸೂರು ದಸರಾ ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 21-11-1972 ಮಂಗಳವಾರ

ಕಲಾಕ್ಷೇತ್ರ

6 ರಿಂದ 8-00 ಸಂಜೆ ಶ್ರೀಮತಿ ಎನ್. ಚೊಕ್ಕಮ್ಮ ಮೈಸೂರು ಸಂಗೀತ

8 ರಿಂದ 9-30 ನೃತ್ಯಕಲಾಕ್ಷೇತ್ರ, ಮೈಸೂರು ನೃತ್ಯ

★

ಜೀವನರಂಗ ನಕಟ್ಟೆ

7 ರಿಂದ 9-30 ಮೈಸೂರು ರಾಜ್ಯದ ಕಲಾವಿದರ ಸಂಘ, ಬೆಂಗಳೂರು
ನಾಟಕ—'ಜೈ ಜವಾನ್ ಜೈ ಕಿಸಾನ್"

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

ಇಂದಿರಾ ಕೊಆಪರೇಟಿವ್ ಬ್ಯಾಂಕ್

ಬೊಂಬಾಯಿ— ಮಹಿಳೆಯರಿಂದಲೇ ಮಹಿಳೆಯರಿಗಾಗಿ ಸಹಕಾರ ರೀತಿಯಿಂದ ಇಂದಿರಾ ಗಾಂಧಿಯವರ 51 ನೇ ಜನ್ಮ ದಿನೋತ್ಸವದಂದು ಇಂದಿರಾ ಗಾಂಧಿ ಕೊ ಆಪರೇಟಿವ್ ಬ್ಯಾಂಕ್ ಸ್ಥಾಪಿಸಲಾಯಿತು

★

★ ನವದೆಹಲಿ— ಹಲವು ಸಾಮಾಜಿಕ ಮತ್ತು ಆರ್ಥಿಕ ಅಪರಾಧಗಳಿಗೆ ಬಹಿರಂಗ ಖಂಡನೆಯನ್ನು ಲಾ ಕಮಿಷನ್ ಶಿಫಾರಸ್ಸು ಮಾಡಿದೆ

ವಿವಾಹ ಮಹೋತ್ಸವ

ಚಿ॥ ರಾಮಚಂದ್ರ (ಮೈಸೂರಿನಲ್ಲಿರುವ ಅಡ್ವೋಕೇಟ್ ಶ್ರೀ ಶೇಷಾದ್ರಿಯವರ ಪುತ್ರ ಮತ್ತು ಬೆಂಗಳೂರು ವಿಮಾನ ಕಾರ್ಖಾನೆ ಇಂಜನಿಯರ್, ಮತ್ತು ಚಿ॥ ಶೋಭನಮ್ಮ (ಬೆಂಗಳೂರು ಯಂತ್ರಸಾಮಗ್ರಿಗಳ ಕಾರ್ಖಾನೆ ಸೀನಿಯರ್ ಇಂಜಿನಿಯರ್ ಶ್ರೀ. ಎಸ್. ರಾಜಗೋಪಾಲ್ ರವರ ಪುತಿ) ಇವರ ವಿವಾಹಮಹೋತ್ಸವವು ಶುಕ್ರವಾರ ಬೆಂಗಳೂರಿನಲ್ಲಿ ವೈಭವವಾಗಿ ನೆರವೇರಿತು.

ಪಾಕ್ ಯುದ್ಧ ಸಿದ್ಧತೆ !

ಜಯಪುರ— ಇಂಡೋ-ಪಾಕ್ ಗಡಿಯಲ್ಲಿ ಪಾಕಿಸ್ತಾನದ ಹೆಚ್ಚು ಪ್ರಮಾಣದ ಸೈನ್ಯದ ಚಟುವಟಿಕೆ ಜೋರಾಗಿ ನಡೆಯತ್ತಿದೆಯೆಂಡೂ, ಮತ್ತೊಂದು ಸುತ್ತಿನ ಯುದ್ಧವಾದೀತೆಂದು ತಮ್ಮ ಯೋಚನೆಯೆಂದೂ ಜನಸಂಘದ ಅಧ್ಯಕ್ಷ ಶ್ರೀ ನಾಜಪೇಯಿಯವರು ಪತ್ರಿಕೆಯವರಿಗೆ ತಿಳಿಸಿದರು

ಕತ್ತೆ ಸಂತೆ

ಉಜ್ಜಯಿನಿ— ಬಾರಾನಗರ ರಸ್ತೆಯಲ್ಲಿ 2 ದಿನಗಳ ಕತ್ತೆ ಸಂತೆಗೆ 3000 ಅಲಂಕರಿಸಲ್ಪಟ್ಟಿರುವ ಕತ್ತೆಗಳು ಬಂದಿವೆ— ದೇಶದಲ್ಲಿ ಪ್ರಪ್ರಥಮವಾದ ಈ ಕತ್ತೆ ಸಂತೆಗೆ ಕೊಂಡುಕೊಳ್ಳುವವರು ಬಹಳ ಜನ ಬಂದಿದ್ದಾರೆ.

★

ಲಾಟರಿಯಲ್ಲಿನ ಬಹುಮಾನ

ಬೆಂಗಳೂರು— ಬೆಂಗಳೂರು ನಗರದಲ್ಲಿ ಮಾರಲಾಗಿದ್ದ ಸಿಎ-1083848 ಟಿಕೆಟಿಗೆ ನಿನ್ನೆ ತೆಗೆದ ಲಾಟರಿಯಲ್ಲಿ ಬಂಪರ್ ಬಹುಮಾನ ರೂ. 5 ಲಕ್ಷ ದೊರೆಯಿತು

●

ಹಾಲಿನ ಡೈರಿ

ಮೈಸೂರು— ಸರಕಾರಿ ಹಾಲಿನ ಡೈರಿಯನ್ನು ಉದ್ಘಾಟಿಸುತ್ತಾ, ಮುಖ್ಯಮಂತ್ರಿ ಶ್ರೀ ದೇವರಾಜಅರಸ್‌ರವರು— ಹಸರು ಮೇವು ಬೆಳೆಯುವ-ವೇವನ್ನು ಘನೀಕರಿಸಿ ಬೇಕಾದಾಗ ಉಪಯೋಗಿಸುವಂತಾಗುವ ಸಲಹೆನೂಡಿದರು ; ದೇಶದಲ್ಲಿ ಪೋಷಣಾಂಶ ಹೆಚ್ಚಲು ಹಾಲಿನ ಉತ್ಪಾದನೆ ಹೆಚ್ಚಬೇಕೆಂದೂ ಹೇಳಿದರು — ಅಧ್ಯಕ್ಷತೆ ವಹಿಸಿದ್ದ ಪಶುಸಂಗೋಪನ ಮಂತ್ರಿ ಶ್ರೀ ಚಿಕ್ಕೇಗೌಡರು— ಬೆಂಗಳೂರಿನಲ್ಲಿ ರೂ 30 ಲಕ್ಷ ಖರ್ಚಿನಲ್ಲಿ ಸೆರ್ಮ ಬ್ಯಾಂಕು ಮತ್ತು ಅಭಿವೃದ್ಧಿ ಸ್ಕೀಂ ಜಾರಿಗೆ ತರಲಾಗುವುದೆಂದು ಹೇಳಿದರು.

ವಸ್ತುಪ್ರದರ್ಶನ ಕಟ್ಟಡ ಮತ್ತು ಕ್ರೀಡಾ ಸ್ಥಾನ

ಮೈಸೂರು— ದೊಡ್ಡಕೆರೆಯಲ್ಲಿನ ಹೆಚ್ಚು ವಿಶಾಲ ಭೂಮಿಯಲ್ಲಿ ಕಟ್ಟಲಾಗುವ ಹೊಸ ವಸ್ತುಪ್ರದರ್ಶನ ಕಟ್ಟಡಕ್ಕೆ ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ಆಸ್ತಿಭಾರಶಿಲೆ ಸ್ಥಾಪಿಸಿದರು ಕ್ರೀಡಾ ಸ್ಥಾನ ನಿರ್ಮಾಣದ ಅಸ್ತಿಭಾರಶಿಲೆಯನ್ನು ಕೈಗಾರಿಕಾ ಮಂತ್ರಿ ಶ್ರೀ ಎಸ್. ಎಂ. ಕೃಷ್ಣರವರು ಸ್ಥಾಪಿಸಿದರು ಕಾರ್ಮಿಕ ಪ್ರವಾಸ, ಪಾರಿಗೆ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ, ಮಾಜಿ ಮಹಾರಾಜರು ಮೈಸೂರು ಅರಮನೆಯನ್ನು ಪ್ರವಾಸಿ ಆಕರ್ಷಣೀಯವಾಗಿ ಮಾಡಲು ಟ್ರಸ್ಟ್ ಸ್ಥಾಪಿಸಲು ಒಪ್ಪಿರುವರೆಂದು ಹೇಳಿದರು ; ಪ್ರದರ್ಶನ ಕಟ್ಟಡದ ವೈಶಿಷ್ಟ್ಯ, ಪ್ರದರ್ಶನ ಇರಬೇಕಾದ ರೀತಿ ಬಗ್ಗೆಯೂ ಹೇಳಿದರು. ಕೈಗಾರಿಕಾ ಮಂತ್ರಿಗಳು ತಮ್ಮ ಭಾಷಣದಲ್ಲಿ ಕೈಗಾರಿಕಾಭಿವೃದ್ಧಿ ಬಗ್ಗೆ ಮಾತನಾಡಿ, ಮೈಸೂರು ನಗರದಲ್ಲಿ ಕ್ಷಿಪ್ರದಲ್ಲೇ ಬೇಕರಿ ಈಸ್ಟ್ ಕಾರ್ಖಾನೆ ಸ್ಥಾಪಿಸಲಾಗುವುದೆಂದು ಹೇಳಿದರು. ಶ್ರೀ ಅಜೀಜ್ ಸೇಟ್‌ರವರು, ನೆಹ್ರೂ ಲೋಕವನ್ನು ವಾಲ್ಟ್ ಡಿಸ್ನೆಲ್ಯಾಂಡ್‌ನಂತೆ ನಿರ್ಮಿಸಲಾಗುವುದೆಂದು ಹೇಳಿದರು ; ಅಲ್ಲಿ ನೆಹ್ರೂರವರ ದೊಡ್ಡ ಚಲಿಸುವಂತೆ ಕಾಣುವ ಪ್ರತಿಮೆ ಎಲೆಕ್ಟ್ರಾನಿಕ್ ಪ್ರತಿಮೆ ಇಟ್ಟು ಟೇಪ್ ರೆಕಾರ್ಡಿನಿಂದ ಭಾಷಣ ಏರ್ಪಡಿಸಲಾಗುವುದೆಂದರು ; ನೆಹ್ರೂ ಲೋಕದ ಯೋಜನೆ 10 ವರ್ಷಗಳಲ್ಲಿ ಮುಗಿಯುವುದೆಂದು ಹೇಳಿದರು ಈಗಿನ ಗುಜರಿಯನ್ನು ಹೊಸ ಕಟ್ಟಡಕ್ಕೆ ಜನವರಿ 26 ರಂದು ವರ್ಗಾಯಿಸಲಾಗುವುದೆಂದೂ, ಜೈಲನ್ನು ಬೇರೆ ಕಡೆ ಏರ್ಪಡಿಸಿ ಆ ಸ್ಥಳವನ್ನು ವಾಸದ ನಿವೇಶನಗಳನ್ನಾಗಿ ಮಾರ್ಪಡಿಸಲಾಗುವುದೆಂದೂ ಹೇಳಿದರು

ಶಾಸಕರಿಗೆ ಸೌಕರ್ಯ

ತಿರುವನಂತಪುರಂ— ಶಾಸನಸಭಾ ಸದಸ್ಯರಿಗೆ ಉಚಿತ ಟೆಲಿಫೋನ್, ತಿಂಗಳಿಗೆ ರೂ 150 ಪ್ರಯಾಣ ಭತ್ಯೆ, ಸ್ಟೇಟ್ ಬಸ್‌ನಲ್ಲಿ ಉಚಿತ ಪ್ರಯಾಣ, ಮತ್ತು ವರ್ಷಕ್ಕೆ 6000 ಕೆಎಂ ಉಚಿತ 1 ನೇ ತರಗತಿ ರೈಲಿನಲ್ಲಿ ಪ್ರವಾಸ ಒದಗಿಸುವ ಮಸೂದೆಯು ಶಾಸನಸಭೆಯಲ್ಲಿ 10 ನಿಮಿಷಗಳಲ್ಲಿಯೇ ಮಂಜೂರಾಯಿತು.

ಕಂಪೆನಿ ಶಾಸನದ ಉಲ್ಲಂಘನೆ

ನವದೆಹಲಿ— ಕಂಪೆನಿ ಶಾಸನ ಸೆಕ್ಷನ್ 293 (ಎ) ಉಲ್ಲಂಘಿಸಿ 10 ಕಂಪೆನಿಗಳು ರಾಜಕೀಯ ಪಕ್ಷಗಳಿಗೆ ಅಥವಾ ರಾಜಕೀಯ ಕಾರಣಗಳಿಗೆ ಹಣ ಕೊಟ್ಟಿವೆ ಎಂದು, ಅವುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆಯೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

ದಿವ್ಯವಾಣಿ

ವ್ಯಸನ ಮತ್ತು ರೋಗರಹಿತವಾದ ಮಾನವನಿಲ್ಲ — ಇರುವೆಡಿಸ್

ವುಡ್‌ಲಾಂಡ್ ಅಮೋಘ 8 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೇರಾ 17 11 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಶಾದಿ ಕೆ ಬಾದ್

ಪಾತ್ರ : ಜಿತೇಂದ್ರ, ರಾಖಿ, ಶತ್ರುಘ್ನಸಿನ್ಹಾ, ನಾಜ್ ಮತ್ತು ಶ್ಯಾಮ

ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satyavadi Press, Chamarajapuram Mysore

SHAKTI SUDHA

A Superb Tonic

Quality Printing Neat Binding

Lakshminarasimha Pres

Sivarampet, Mysore

Help The Gorakshana

—Humanitarian Propoganda Monthly....



Protect the Cow

Contribute Liberally to the National Defence Fund